ವಿಜಯ ಕರ್ನಾಟಕ

## ನಗರದಲ್ಲಿ ನಡೆದ ಸಮೀಕ್ಷೆಯಿಂದ ಮಾಹಿತಿ

# ಆರು ಜನರಿಗೆ ಒಂದು ಮರ

ಸಾಂದರ್ಭಿಕ ಚಿತ್ರ



■ **ವಿಕ ಸುದ್ದಿಲೋಕ** ಬೆಂಗಳೂರು

ಒಬ್ಬ ಮನುಷ್ಯನ ಉಸಿರಾಟಕ್ಕೆ ಸಾಕಾಗುವಷ್ಟು ಆಮ್ಲಜನಕ ಉತ್ಪತ್ತಿ ಮಾಡಲು ಕನಿಷ್ಠ 6 ಮರಗಳು ಬೇಕು. ಆದರೆ, ಬೆಂಗಳೂರಿನಲ್ಲಿರುವುದು ಆರು ಜನರಿಗೆ ಒಂದು ಮರ!

**ದೊಡ್ಡ ಸುದ್ದಿ**

ಹೌದು, ಇಂತಹ ಅಚ್ಚರಿಯ ಕರ ಸಂಗತಿ ಮರ ಸಮೀಕ್ಷೆಯಿಂದ ಹೊರಬಂದಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಭಾರತೀಯ ವಿಜ್ಞಾನ ಸಂಸ್ಥೆ ಸಹಯೋಗದೊಂದಿಗೆ ಕಳೆದ ನಾಲ್ಕು ತಿಂಗಳು ಸಮೀಕ್ಷೆ ನಡೆಸಿ ತಾಂತ್ರಿಕ ವರದಿ ಬಿಡುಗಡೆ ಮಾಡಿದೆ.

ಸ್ಯಾಟಲೈಟ್ ಆಧಾರಿತ ಚಿತ್ರಗಳ ಮೂಲಕ ಟ್ರೀ-ಕೆನೋಪಿ ಎಂಬ ತಂತ್ರಾಂಶ ಆಧರಿಸಿ ಬಿಬಿಎಂಪಿ ವ್ಯಾಪ್ತಿಯ 197 ವಾರ್ಡ್‌ಗಳ ಪೈಕಿ 194 ವಾರ್ಡ್‌ಗಳಲ್ಲಿ ಮರಗಳ ಸಮೀಕ್ಷೆ ಮಾಡಲಾಗಿದೆ. 2011ರ ಜನಗಣತಿ ಪ್ರಕಾರ ಬೆಂಗಳೂರು ಮಹಾನಗರದಲ್ಲಿ 95,82,999 ಜನಸಂಖ್ಯೆ (ನಗರಕ್ಕೆ ಬಂದು ಹೋಗುವವರು ಸೇರಿ)ಇದೆ. ಆದರೆ, 14,78,412 ಮರಗಳಿವೆ. ಒಬ್ಬ ವ್ಯಕ್ತಿಗೆ ಸರಾಸರಿಯಾಗಿ 0.115ರಷ್ಟು ಮರ ಸಿಗುತ್ತದೆ. ಅಂದರೆ, ಪ್ರತಿ 6 ಮಂದಿಗೆ ಒಂದು ಮರ ಇದೆ.

ದುರಂತ ಎಂದರೆ, 100ಕ್ಕಿಂತಲೂ ಕಡಿಮೆ ಮರ ಇರುವಂತಹ ಮೂರು ವಾರ್ಡ್‌ಗಳು ಪತ್ತೆಯಾಗಿವೆ. ಅತ್ಯಂತ ಹೆಚ್ಚು ವಾಣಿಜ್ಯ ಚಟುವಟಿಕೆಗಳಿಂದ ಕೂಡಿದ ಚಿಕ್ಕಪೇಟೆ ವಾರ್ಡ್‌ನಲ್ಲಿ 43,997 ಜನಸಂಖ್ಯೆ ಇದ್ದು, ಕೇವಲ 26 ಮರಗಳಿವೆ. ಶಿವಾಜಿನಗರ ವಾರ್ಡ್‌ನಲ್ಲಿನ 66,280 ರಷ್ಟು ಜನಸಂಖ್ಯೆಗೆ 70 ಮರಗಳು ಮಾತ್ರ ಇವೆ. ಹಾಗೆ ನೋಡಿದರೆ, ಬೆಂಗಳೂರು ಹೊರವಲಯದ ಪ್ರದೇಶಗಳಲ್ಲಿಯೇ ಹೆಚ್ಚಿನ ಮರಗಳಿವೆ. ವರ್ತೂರು ವಾರ್ಡ್‌ನಲ್ಲಿ ಅತಿ ಹೆಚ್ಚಿನ ಮರಗಳಿದ್ದು, 30,430 ಜನಸಂಖ್ಯೆಗೆ 72,069 ಮರಗಳಿವೆ. ಇನ್ನು ಬೆಳ್ಳಂದೂರು ವಾರ್ಡ್‌ನಲ್ಲಿ 25,614 ಮಂದಿ ಜನಸಂಖ್ಯೆಗೆ 54,366 ಮರಗಳಿವೆ ಎಂದು ಗೊತ್ತಾಗಿದೆ.

**ಸಾವಿನ ನಗರಿ:** ''1970ರ ಸಂದರ್ಭದಲ್ಲಿ ಬೆಂಗಳೂರನ್ನು ಉದ್ಯಾನ ನಗರಿ ಎಂದು ಕರೆಯಲಾಗುತ್ತಿತ್ತು. 1992ರ ಸಂದರ್ಭದಲ್ಲಿ ಸಾಕಷ್ಟು ಕೈಗಾರಿಕೆಗಳು ಬಂದವು. 2000ದಲ್ಲಿ ಐಟಿ-ಬಿಟಿ ಬೆಳವಣಿಗೆ ಆರಂಭವಾಯಿತು. ಇದರಿಂದಾಗಿ ಗಾರ್ಡನ್ ಸಿಟಿ ಎಂದಾಗಿದ್ದ ಹೆಸರು, 2005ರಲ್ಲಿ ಗಾರ್ಬೇಜ್ ಸಿಟಿ ಆಯಿತು. ಆದರೆ, ಈಗ ಪರಿಸರ ಮಾಲಿನ್ಯದಿಂದಾಗಿ ಜನರಲ್ಲಿ ಕಿಡ್ನಿ, ಶ್ವಾಸಕೋಶ ಮುಂತಾದ ಸಮಸ್ಯೆಗಳು ಹೆಚ್ಚಾಗಿ ಬೆಂಗಳೂರು ಸಾವಿನ ನಗರಿ ಆಗುತ್ತಿದೆ,'' ಎಂದು ಮರಗಳ ಸಮೀಕ್ಷೆ ನಡೆಸಿದ ಭಾರತೀಯ ವಿಜ್ಞಾನ ಸಂಸ್ಥೆಯ ಡಾ.ಟಿ ಎ ರಾಮಚಂದ್ರ ಹೇಳಿದರು.

''ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ನಗರ ಪ್ರದೇಶದಲ್ಲಿ ಪ್ರತಿ ವ್ಯಕ್ತಿಗೆ ಆಮ್ಲಜನಕ ಹಾಗೂ ಇತರ ಅರಣ್ಯಾಧಾರಿತ ಸೇವೆಗಳನ್ನು ಪೂರೈಸಲು ಕನಿಷ್ಠ 9.5 ಚ.ಮೀ. ಹಸಿರು ವಲಯ ಅಗತ್ಯ. ಅಂದಾಜಿನ ಪ್ರಕಾರ, 1ಹೆಕ್ಟೇರ್ ಅರಣ್ಯವು ಒಂದು ವರ್ಷಕ್ಕೆ 6 ಟನ್‌ಗಳಷ್ಟು ಇಂಗಾಲವನ್ನು ಸಂಗ್ರಹಿಸಬಲ್ಲದು. ಅಂದರೆ, ಪ್ರತಿ ಮರ 6 ಕಿ.ಗ್ರಾಂ.ನಷ್ಟು ಇಂಗಾಲ ಸಂಗ್ರಹ ಮಾಡುವ ಸಾಮರ್ಥ್ಯ ಹೊಂದಿದೆ. ಮನುಷ್ಯ ಉಸಿರಾಟದ ಮೂಲಕ ವರ್ಷಕ್ಕೆ 192 ರಿಂದ 328 ಕಿ.ಗ್ರಾಂ.ನಷ್ಟು ಇಂಗಾಲ ಬಿಡುಗಡೆ ಮಾಡುತ್ತಾನೆ. ಆ ಪ್ರಕಾರ, ಒಬ್ಬ ಮನುಷ್ಯನಿಗೆ 32ರಿಂದ 55 ಮರಗಳು ಅವಶ್ಯಕ. ನಗರ ಪ್ರದೇಶದಲ್ಲಿ ಕನಿಷ್ಠ 6 ಮರಗಳಾದರೂ ಇರಬೇಕು. ದುರಂತ ಎಂದರೆ ಬೆಂಗಳೂರಿನಲ್ಲಿ ಆರು ಮಂದಿಗೆ ಒಂದು ಮರ ಇದೆ,'' ಎಂದರು. ''ನಗರದಲ್ಲಿ ಕೆರೆ ಹಾಗೂ ಮರಗಳು ಮಾಯವಾಗುವುದಕ್ಕೆ ಮುಂದಾಲೋಚನೆಯಿಲ್ಲದ ನಗರದ ಬೆಳವಣಿಗೆಯೇ ಪ್ರಮುಖ ಕಾರಣ. ರಸ್ತೆ ಅಗಲೀಕರಣ, ಕೇಬಲ್‌ಗಳ ಅಳವಡಿಕೆ ಮುಂತಾದ ಕಾರಣಗಳಿಂದ ಮರಗಳನ್ನು ನಿರಂತರವಾಗಿ ಕಡಿಯಲಾಗುತ್ತಿದೆ. ಕಳೆದ 20 ವರ್ಷಗಳಲ್ಲಿ ಬೆಂಗಳೂರಿನಲ್ಲಿ ಕಾಂಕ್ರೀಟ್ ವಲಯ ಶೇ.632ರಷ್ಟು ಹೆಚ್ಚಳವಾಗಿದೆ. ಶೇ.72ರಷ್ಟು ಸಸ್ಯವರ್ಗ ಮತ್ತು ಶೇ.79ರಷ್ಟು ಕೆರೆಗಳನ್ನು ಕಳೆದುಕೊಂಡಿದ್ದೇವೆ,'' ಎಂದು ವಿವರಿಸಿದರು.

### ವರದಿ ಮೂಲಕ ಸರಕಾರಕ್ಕೆ ಶಿಫಾರಸು

''ನಗರದಲ್ಲಿನ ಪರಿಸರ ಮತ್ತು ಮರಗಳ ಸಂಖ್ಯೆ ಕುರಿತು ತಯಾರಿಸಲಾದ ವೈಜ್ಞಾನಿಕ ವರದಿಯನ್ನು ಸರಕಾರಕ್ಕೆ ಸಲ್ಲಿಸಲಾಗುವುದು. ಪ್ರತಿ ಆರು ಮಂದಿಗೆ ಒಂದು ಮರ ಇದೆ ಎನ್ನುವುದು ನೋಡಿದಾಗ ಗಾಬರಿಯಾಗುತ್ತದೆ. ಒಂದು ಮರ ಕಡಿದಾಗ ಕಡ್ಡಾಯವಾಗಿ ಮೂರು ಮರ ನೆಡಬೇಕು ಎಂಬಂತಹ ವ್ಯವಸ್ಥೆ ತರಬೇಕು. ಈ ಹಿನ್ನೆಲೆಯಲ್ಲಿ ವರದಿ ಮೂಲಕ ಸರಕಾರಕ್ಕೆ ಕೆಲವು ಶಿಫಾರಸುಗಳನ್ನು ಸಲ್ಲಿಸಲಾಗುವುದು. ನಗರದಲ್ಲಿ ಅರಣ್ಯ ಇಲಾಖೆ, ಬಿಬಿಎಂಪಿ, ನಗರಾಭಿವೃದ್ಧಿ ಇಲಾಖೆ ಎಲ್ಲ ಸಂಸ್ಥೆಗಳು ಸೇರಿ ಯೋಜನೆ ರೂಪಿಸಬೇಕಿದೆ,'' ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ವಾಮನ್ ಆಚಾರ್ಯ ಹೇಳಿದರು.

### ಅತಿ ಕಡಿಮೆ ಮರಗಳಿರುವ ವಾರ್ಡ್‌ಗಳು

| ವಾರ್ಡ್ | ಜನಸಂಖ್ಯೆ | ಮರಗಳ ಸಂಖ್ಯೆ |
|---|---|---|
| ಚಿಕ್ಕಪೇಟೆ | 43,997 | 26 |
| ಕೆಂಪಾಪುರ ಅಗ್ರಹಾರ | 63,853 | 62 |
| ಶಿವಾಜಿನಗರ | 66,280 | 70 |
| ಕುಶಾಲನಗರ | 41,383 | 89 |
| ಮುನೇಶ್ವರನಗರ | 55,562 | 116 |
| ದಯಾನಂದನಗರ | 63,052 | 131 |
| ಕಾಡುಗೊಂಡನಹಳ್ಳಿ | 62,304 | 169 |
| ಲಗ್ಗೆರೆ | 48,973 | 172 |
| ಗುರಪ್ಪನಪಾಳ್ಯ | 55,283 | 181 |
| ವೃಷಭಾವತಿನಗರ | 50,003 | 208 |
| ಕಮ್ಮನಹಳ್ಳಿ | 61,883 | 262 |

### ಅತಿ ಹೆಚ್ಚು ಮರಗಳಿರುವ ವಾರ್ಡ್‌ಗಳು

| ವಾರ್ಡ್ | ಜನಸಂಖ್ಯೆ | ಮರಗಳ ಸಂಖ್ಯೆ |
|---|---|---|
| ವರ್ತೂರು | 30,430 | 72,069 |
| ಬೆಳ್ಳಂದೂರು | 25,614 | 54,366 |
| ಅರಮನೆ ನಗರ | 40,379 | 43,743 |
| ಕಾಡುಗೋಡಿ | 41,072 | 39,509 |
| ಬೇಗೂರು | 29,205 | 28,657 |
| ಬೆನ್ನಿಗಾನಹಳ್ಳಿ | 47,446 | 23,829 |
| ಜ್ಞಾನಭಾರತಿ | 28,473 | 24,474 |
| ರಾಜರಾಜೇಶ್ವರಿನಗರ | 38,401 | 22,386 |
| ಸಂಪಂಗಿನಗರ | 43,997 | 21,362 |
| ಸರ್ವಜ್ಞನಗರ | 46,419 | 18,458 |
| ಎಚ್‌ಎಎಲ್ | 56,837 | 18,093 |
| ಗರುಡಾಚಾರ್ ಪಾಳ್ಯ | 35,695 | 14,445 |
| ಉತ್ತರಹಳ್ಳಿ | 37,677 | 13,445 |